ದೂರನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

ವಿ.ವಿ.ಪುರಂ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು ದೂರಿನ ಸಂಗತಿಗಳು ಸಿವಿಲ್ ಸ್ವರೂಪದೆಂದು, ಫಿರ್ಯಾದಿಯ ತನಿಖೆಗೆ ಸಹರಿಕಸದೆ, ಯಾವುದೇ ಸಾಕ್ಷಾಧಾರಗಳನ್ನು ಒದಗಿಸಿಲ್ಲವೆಂದು ಬಿ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ.

ಫಿರ್ಯಾದಿ ಪರ ವಕೀಲರು ಸಲ್ಲಿಸಿರುವ ತಕರಾರಿನಲ್ಲಿ ಆರೋಪಿತರು ಗಂಭೀರ ಸ್ವರೂಪಾದ ಅಪರಾದವೆಸಗಿದ್ದರೂ ಸಹ ಪೊಲೀಸರು ಸರಿಯಾಗಿ ತನಿಖೆ ಮಾಡದೆ ಬಿ ಅಂತಿಮ ವರದಿಯನ್ನು ಸಲ್ಲಿಸಿರುವರೆಂದು ಅದನ್ನು ತಿರಸ್ಕರಿಸಬೇಕೆಂದು ವಿನಂತಿಸಿದ್ದಾರೆ.

ಫಿರ್ಯಾದಿ ಕಮಲ್ ಕಿಶೋರ ಅವರು ನೀಡಿರುವ ದೂರಿನಲ್ಲಿ ಬಸವನಗುಡಿ ಬುಲ್ ಟೆಂಪಲ್ ರಸ್ತೆಯಲ್ಲಿರುವ ನಂ. 99/3 ರಲ್ಲಿ 12,699 ಚದುರ ಅಡಿ ಆಸ್ತಿ ಇದೆ ಎಂದು, ಅದರ ಸಂಬಂಧ ಆರೋಪಿತರು ಫಿರ್ಯಾದಿಯೊಂದಿಗೆ ಜಂಟಿ ಕರಾರು ಪತ್ರ ಮಾಡಿಕೊಂಡಿದ್ದು, ಆ ಒಪ್ಪಂದದಂತೆ ನಡೆದುಕೊಳ್ಳದೆ ನಂಬಿಕೆ ದ್ರೋಹ ಮತ್ತು ವಂಚನೆ ಎಸಗಿರುವರೆಂದು ಆಪಾದಿಸಲಾಗಿದೆ. ತನಿಖಾಧಿಕಾರಿಗಳು ಸಲ್ಲಿಸಿರುವ ಬಿ ಅಂತಿಮ ವರದಿಯಲ್ಲಿ ಫಿರ್ಯಾದಿಯು ಯಾವುದೇ ಸಾಕ್ಷಾಧಾರಗಳನ್ನು ಹಾಜರು ಪಡಿಸದೆ ಮತ್ತು ತನಿಖೆಗೆ ಸಹಕರಿಸಿಲ್ಲವೆಂದು ಹೇಳಿದ್ದಾರೆ. ಆದರೆ ಫಿರ್ಯಾದಿಯು ತಮ್ಮನ್ನು ಪೊಲೀಸರು ಸಂಪರ್ಕಿಸಿಲ್ಲವೆಂದು ಸಾಧಿಸುತ್ತಿದ್ದಾರೆ. ಈ ಎಲ್ಲ ಕಾರಣಗಳಿಂದ ಫಿರ್ಯಾದಿಗೆ ಮತ್ತೊಂದು ಅವಕಾಶವನ್ನು ಕೊಟ್ಟು ತನಿಖೆಗೆ ಸಹಕರಿಸುವಂತೆ ಆದೇಶಿದಲ್ಲಿ ಪ್ರಕರಣದ ಸತ್ಯಾಂಶ ತಿಳಿಯಬಹುದೆಂದು ತೀರ್ಮಾನಿಸಿ ಕೆಳಗಿನಂತೆಃ

## ಆದೇಶ

ವಿ.ವಿ.ಪುರಂ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು ಸಲ್ಲಿಸಿರುವ ಬಿ ಅಂತಿಮ ವರದಿಯನ್ನು ತಿರಸ್ಕರಿಸಲಾಗಿದೆ.

ವಿ.ವಿ.ಪುರಂ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರಿಗೆ ಪ್ರಕರಣವನ್ನು ತನಿಖೆ ಮಾಡಿ ಅಂತಿಮ ವರದಿಯನ್ನು ಸಲ್ಲಿಸುವಂತೆ ಆದೇಶಿಸಲಾಗಿದೆ.

ಫಿರ್ಯಾದಿಯು ತನಿಖಾಧಿಕಾರಿಗಳಿಗೆ ಸಹಕರಿಸಲು ಆದೇಶಿಸಲಾಗಿದೆ.

ಅಂತಿಮ ವರದಿಗಾಗಿ ಪ್ರಕರಣವನ್ನು ದಿನಾಂಕ 18/05/2023 ರಂದು ಕರೆಯುವುದು.

3 ನೇ ಎ.ಸಿ.ಎಮ್.ಎಮ್. ನ್ಯಾ,

ಬೆಂಗಳೂರು.